**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ/26/ಗ್ರಾನೀಸ(4)2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:04.03.2014

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್,
**ಚಿತ್ರದುರ್ಗ.**

ಮಾನ್ಯರೆ,

ವಿಷಯ : ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಯ ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಲ್ಲಿ ಟಾಸ್ಕ್‌ಫೋರ್ಸ್‌ಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ : ತಮ್ಮ ಕಛೇರಿ ಪತ್ರ ಸಂಖ್ಯೆ: ಜಿಪಂಚಿ/ಕಾಮಗಾರಿ/ಸಿ.ಆರ್-ನೀಸ/2013-14, ದಿನಾಂಕ:15.02.2014.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿನ ಪ್ರಸ್ತಾವನೆ ಕುರಿತು ಪರಿಶೀಲಿಸಿದೆ. ಸದರಿ ಪ್ರಸ್ತಾಪಿತ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳ ಪೈಕಿ ಚಳ್ಳಕೆರೆ ತಾಲ್ಲೂಕಿನ ಕ್ರಮ ಸಂಖ್ಯೆ:26,37,46,49,50 &74ರಲ್ಲಿನ **ರೂ.37.96ಲಕ್ಷ** ಅಂದಾಜು ಮೊತ್ತದ ಕಾಮಗಾರಿಗಳನ್ನು, ಹಿರಿಯೂರು ತಾಲ್ಲೂಕಿನ ಕ್ರಮ ಸಂಖ್ಯೆ:45ರಲ್ಲಿನ **ರೂ.8.50ಲಕ್ಷ** ಅಂದಾಜು ಮೊತ್ತದ ಕಾಮಗಾರಿಯನ್ನು, ಹೊಸದುರ್ಗ ತಾಲ್ಲೂಕಿನ ಕ್ರಮ ಸಂಖ್ಯೆ:17,24,31,37,41,43,44,45,46,48,54,55,57,59,60,61 & 63ರಲ್ಲಿನ **ರೂ.76.50ಲಕ್ಷ** ಅಂದಾಜು ಮೊತ್ತದ ಕಾಮಗಾರಿಗಳನ್ನು ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ಕ್ರಮ ಸಂಖ್ಯೆ:17ರಲ್ಲಿನ **ರೂ.2.00ಲಕ್ಷ** ಅಂದಾಜು ಮೊತ್ತದ ಕಾಮಗಾರಿಗಳನ್ನು ಹೊರತುಪಡಿಸಿ ಈ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಅನುಮೋದಿಸಿದೆ.

| ಕ್ರಮ ಸಂಖ್ಯೆ | ತಾಲ್ಲೂಕು | ಅನುಮೋದಿತ ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಚಳ್ಳಕೆರೆ | 68 | 313.44 |
| 2 | ಚಿತ್ರದುರ್ಗ | 23 | 103.75 |
| 3 | ಹಿರಿಯೂರು | 80 | 176.37 |
| 4 | ಹೊಳಲ್ಕೆರೆ | 44 | 204.00 |
| 5 | ಹೊಸದುರ್ಗ | 53 | 183.05 |
| 6 | ಮೊಳಕಾಲ್ಮೂರು | 24 | 69.80 |
| | ಒಟ್ಟು | **292** | **1050.41** |

ಮೇಲ್ಕಂಡಂತೆ **ರೂ.10.5041ಕೋಟಿ** ಅಂದಾಜು ಮೊತ್ತದ ಒಟ್ಟು **292** ಅನುಮೋದಿತ ಕಾಮಗಾರಿಗಳನ್ನು **NRDWP** ಯೋಜನೆಯ **C & Q** ಘಟಕದಡಿ ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಅನುದಾನದಡಿ ಅನುಷ್ಠಾನಗೊಳಿಸಿ, **IMIS**ನಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ದಾಖಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇಮೇಲ್:rk3452000@ gmail.com
(ಫೋನ್:22032806, ಫ್ಯಾಕ್ಸ್:22203175)

ಪ್ರತಿ:ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿರಿಂಗ್ ವಿಭಾಗ **ಚಿತ್ರದುರ್ಗ** ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.